

ಅಬು ಪರ್ವತದ ಸೊಬಗಿಗೆ ಕಳಶಪ್ರಾಯ ವಿಶಿಷ್ಟ ಶಿಲೆ

ಅನೇಕ ಹಿರಿಯರು ಕೇಂದ್ರವನ್ನು ಮುನ್ನಡೆಸುತ್ತಿದ್ದಾರೆ. ಈಗ ಶತಾಯುಷಿ ದಾದಿ ಜಾನಕಿ ನೇತೃತ್ವ ವಹಿಸಿದ್ದಾರೆ. 'ಓಂ ಶಾಂತಿ' ಇಲ್ಲಿನ ಮೂಲಮಂತ್ರ. ಪ್ರತಿ ದಿನ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು, ಭಕ್ತರು ಬಂದು ಹೋಗುತ್ತಾರೆ. ಸಂಸ್ಥೆ ಸಮಾಜದ ಎಲ್ಲಾ ಸ್ತರದ ಜನರನ್ನು ಕೇಂದ್ರವಾಗಿಟ್ಟುಕೊಂಡು ಅವರನ್ನು ಆಕರ್ಷಿಸುವ ನಿಟ್ಟಿನಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ವರ್ಷಪೂರ್ತಿ ಹಮ್ಮಿಕೊಳ್ಳುತ್ತದೆ.

ಬೆಳಿಗ್ಗೆ 7.30ಕ್ಕೆ ಸಂಸ್ಥೆಯ ಚಟುವಟಿಕೆ ಜೊತೆಗೆ ಆಧ್ಯಾತ್ಮ ಸಂದೇಶವನ್ನು ಅಲ್ಲಿನ ಹಿರಿಯರು ಸಾರಿದರೆ, 9 ಗಂಟೆ ಬಳಿಕ ಧಾರ್ಮಿಕ ಗೋಷ್ಠಿ ಜರುಗುತ್ತದೆ. ವಿವಿಧ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ. ಮಧ್ಯಾಹ್ನ ಬಿಡುವು. ಸಂಜೆ ಇನ್ನೊಂದು ಪ್ರಮುಖ ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳು– ಹೀಗೆ ಇಲ್ಲಿನ ದಿನಚರಿ ಸಾಗುತ್ತದೆ. ಸ್ವಯಂ ಸೇವಕರ ಜೊತೆ ನೂರಾರು ಕಾರ್ಮಿಕರೂ ಇಲ್ಲಿ ಉದ್ಯೋಗ ಪಡೆದಿದ್ದಾರೆ.

ನಿತ್ಯ ಸಾವಿರಾರು ಜನರಿಗೆ ಊಟ, ತಿಂಡಿ ವ್ಯವಸ್ಥೆ. ಅದಕ್ಕಾಗಿ ಸ್ವಯಂ ಸೇವಕರ ಜೊತೆಗೆ ಅತ್ಯಾಧುನಿಕ ಯಂತ್ರಗಳನ್ನೂ ಹೇರಳವಾಗಿ ಬಳಸಿಕೊಳ್ಳಲಾಗಿದೆ. ಈ ಕೇಂದ್ರದಲ್ಲಿ ಅಡಿಗೆ ಮನೆಯಿಂದ ಹಿಡಿದು ಎಲ್ಲೆಡೆ ಸ್ವಚ್ಛತೆಗೆ ಪ್ರಥಮ ಆದ್ಯತೆ.

ವಾಸಕ್ಕೆ ಉತ್ತಮ ಕೊಠಡಿ. ದಿನದ 24 ಗಂಟೆಯೂ ಬಿಸಿ ನೀರು, ಕುಡಿಯಲು ಶುದ್ಧೀಕರಿಸಿದ ತಣ್ಣೀರು ಲಭ್ಯ. ಅಲ್ಲಲ್ಲಿ ಪುಟ್ಟ ಉದ್ಯಾನವನಗಳಿವೆ.

ಏಕಕಾಲದಲ್ಲಿ ಸಾವಿರಾರು ಜನ ಕುಳಿತುಕೊಳ್ಳಲು ಅನುಕೂಲವಾದ ವಿಶಾಲ ಸಭಾಂಗಣ ಇದ್ದು ಪ್ರಮುಖ ಕಾರ್ಯಕ್ರಮಗಳು ಅಲ್ಲೇ ನಡೆಯುತ್ತವೆ. 20 ಸಾವಿರ ಜನ ಬಂದರೂ ವಸತಿಗೆ ಸಮಸ್ಯೆಯಿಲ್ಲ. ಆಧ್ಯಾತ್ಮ ಪ್ರಸಾರದ ಸುಸಜ್ಜಿತ ಪುಸ್ತಕ ಮಳಿಗೆ, ಕ್ಯಾಸೆಟ್ ಲೈಬ್ರರಿ, ಧಾರ್ಮಿಕ ಸಂದೇಶ ಸಾರುವ ಇತರೆ ವಸ್ತುಗಳನ್ನು ಇಲ್ಲಿ ಮಾರಾಟಕ್ಕೆ ಇಡಲಾಗಿದೆ.

25 ಎಕರೆ ಪ್ರದೇಶದಲ್ಲಿ ಪ್ರತಿ ಗಂಟೆಗೆ ಒಂದು ಕಿಲೋವ್ಯಾಟ್ ವಿದ್ಯುತ್

ಸೌರಶಕ್ತಿ ಯೋಜನೆಯ ನೋಟ



ಹಸಿರು ಹೊದ್ದ ಸಸ್ಯಕಾಶಿ

